ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ತಾಲ್ಲೂಕು ವಾರು ಈ ರೀತಿ ಕೊಡದೇ ಇರುವುದು ನೋಡಿದರೆ ಕೆಲವರ ಇಷ್ಟಪ್ಲೊಯ್ಟ್ಸ್ ಮೇಲೆ ಕೆಲವು ತಾಲ್ಲೂಕು ಗಳಲ್ಲ ಬಹಳವಾಗಿ ಕೆಲಸಗಳನ್ನು ತೆಗೆದುಕೊಂಡಿದ್ದೀರಿ, ಅದನ್ನು ಉತ್ತರದಲ್ಲಿ ಕೊಟ್ಟುಬಿಟ್ಟರೆ ಇತರರಿಗೆ ಅನ ಮಾಧಾನವಾಗುತ್ತದೆ ಎಂದು ಬಿಟ್ಟಿದ್ದೀರಿ ಎಂದು ಅರ್ಥ ವಾಗುತ್ತದೆಯಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಆ ರೀತಿ ಇಷ್ಟಪ್ಲೊಯ್ಟ್ಸ್ ಯಾವುದು ಇದೆಯೋ ನನಗೆ ಗೊತ್ತಿಲ್ಲ.

Houses for Harijans in Chintamani Taluk.

Q.—1032. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) the total number of houses for which amelioration grant is given so far since 1951-52 to construct houses for the Depressed Class people in Chintamani Taluk ;

(*b*) out of this the number of houses to which payment of full amount is pending ;

(*c*) the number of houses the construction work of which had been commenced on the expectation of financial help from Government and works stopped after a little progress due to non-receipt of expected grants ?

A.—Sri K. HANUMANTHAIYA (Chief Minister).—

(*a*) 248.

(*b*) 217 cases in which only part payment has been made and the construction is in progress.

(*c*) Information is not available.

ಶ್ರೀ ಜೆ. ನಾರಾಯಣಪ್ಪ.—ನರ್ಮಾರದ ಹಣದ ಸಹಾಯದ ನಿರೀಕ್ಷೆಯ ಮೇಲೆ ಮನೆಗಳ ಕೆಲಸ ಪ್ರಾರಂಭವಾಗಿ ಅರ್ಧ ಮುಕ್ಕಾಲು ಕೆಲಸವಾಡಿ ಹಣ ಸಹಾಯ ಒದಗದಿದ್ದುದರಿಂದ ಕೆಲಸ ನಿಂತುಹೋಗಿ ರುವ ಮನೆಗಳ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ ವಿವರಗಳು ದೊರೆಯುವುದಿಲ್ಲ ಎಂದು ಹೇಳಿದ್ದೀರಿ. ಅರ್ಧ ಕೆಲಸ ಆಗಿರುವ ಮನೆಗಳನ್ನು ಪೂರ್ತಿಮಾಡಲು ಈ ವರ್ಷ ಏರ್ಪಾಡು ಮಾಡಿಕೊಡುತ್ತೀರಾ ?

*ಶ್ರೀ ಕೆ. ಹನುಮಂತಯ್ಯ.—ಅದಷ್ಟು ಅರ್ಧಂಬರ್ಧ ಆಗಿರುವ ಮನೆಗಳನ್ನು ಪೂರ್ತಿ ಮಾಡುವುದಕ್ಕೆ ಪ್ರಯತ್ನಪಡೋಣ.

ಶ್ರೀ ಎ. ಮುನಿಯಪ್ಪ.—(b) ಪ್ರಶ್ನೆಗೆ ಉತ್ತರ ವಾಗಿ ಕೆಲಸ ಮುಂದುವರಿಯುತ್ತದೆ ಎಂದು ಹೇಳಿ ದ್ದೀರಿ. ದುಡ್ಡೇ ಇಲ್ಲವಲ್ಲ, ಸ್ವಾಮಿ ?

ಶ್ರೀ ಕೆ. ಹನುಮಂತಯ್ಯ.—ದುಡ್ಡು ಇಲ್ಲದೇ ಇದ್ದರೆ ಕೆಲಸ ಆಗುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಹಾಗಾದರೆ ಆ ಮನೆಗ ಳನ್ನು ಏಕೆ ಸ್ವಾಮಿ, ಮಂಜೂರು ಮಾಡಿದ್ದು ?

ಶ್ರೀ ಕೆ. ಹನುಮಂತಯ್ಯ.—ಮಂಜೂರು ಮಾಡಿದ ಮನೆಗಳನ್ನು ನಿಲ್ಲಿಸುವುದಿಲ್ಲ. ಮಂಜೂರು ಮಾಡದೇ ಇರುವುದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಈಗ ನಾನು ಕೇಳುತ್ತಾ ಇರುವುದು ಮಂಜೂರು ಮಾಡಿರುವ ಮನೆಗಳನ್ನೇ ದುಡ್ಡಿಲ್ಲವೆಂದು ನಿಲ್ಲಿಸುವುದಕ್ಕೆ ಕಾರಣವೇನು ?

ಶ್ರೀ ಕೆ. ಹನುಮಂತಯ್ಯ.—ಎಷ್ಟು ದುಡ್ಡು ಇದೆಯೋ ಅಷ್ಟು ದುಡ್ಡನ್ನೂ ಕೊಡುತ್ತಾರೆ.

ಶ್ರೀ ಟಿ. ಹನುಮಯ್ಯ.—(ಎ) ಪ್ರಶ್ನೆಗೆ ಉತ್ತರ ವಾಗಿ 1951-52ರ ಲಾಗಾಯ್ತು ಇದುವರೆಗೆ 248 ಮನೆಗಳಿಗೆ ಗ್ರಾಂಟು ಮಂಜೂರು ಮಾಡಿದೆ ಎಂದು ಹೇಳಿದ್ದೀರಿ. ಈ ಪೈಕಿ ಪೂರ್ತಿ ಹಣ ಕೊಡದೆ ಬಾಕಿ ಇರುವ ಮನೆಗಳು 217 ಎಂದು ಹೇಳಿದ್ದೀರಿ. ಹಾಗಾ ದರೆ 31 ಮನೆಗಳಿಗೆ ಮಾತ್ರ ಪೂರ್ತಿ ಗ್ರಾಂಟು ಕೊಟ್ಟಿದೆಯೇ ?

Mr. SPEAKER.—There is the answer printed and furnished.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಣ ಕೊಟ್ಟಿ ರುವವರ ಪೈಕಿ ಮನೆ ಕಟ್ಟುವುದಕ್ಕೆ ಪ್ರಯತ್ನಪಡದೇ ಇರುವವರ ಸಂಖ್ಯೆ ಎಷ್ಟು, ಸ್ವಾಮಿ ?

Sri K. HANUMANTHAIYA.—I cannot say now.

Middle School for Thimmappaiyana Halli.

Q.—926. Sri V. MASIYAPPA (Hiriyur).—

Will the Government be pleased to state :—

(*a*) the number of Middle Schools in Naikarahatty hobli, Challakere Taluk ;

(*b*) if there is not a demand for more schools :

(*c*) if the villagers of Thimmappaiyanahally have asked for a New Type Middle School ?

A.—Sri A. G. RAMACHANDRA RAO (Minister for Law and Education).—

(*a*) (i) Middle School ... One
(ii) New Type Middle School ... One

(*b*) Yes.

(*c*) Yes.